# ಹೂಬನ

ರಿಚ್ಮಂಡ್ ಕನ್ನಡ ವಾರ್ತಾಪತ್ರಿಕೆ



Richmond Kannada Sangha — First Issue, July 2005



**ವಕ್ರ ತುಂಡ ಮಹಾಕಾಯ ಸೂರ್ಯಕೋಟಿ ಸಮಪ್ರಭಾ**

**ನಿರ್ವಿಘ್ನಂ ಕುರುಮೇ ದೇವಾ ಸರ್ವಕಾರ್ಯೇಶು ಸರ್ವದಾ**

VAKRATUNDA MAHAAKAAYA SURYAKOTI SAMAPRABHAA

NIRVIGHNAM KURUMEA DEVAA SARVA KAARYESHU SARVADAA

(Oh, Lord, with a twisted trunk and a huge cosmic body, with luster equivalent to that of billions of Suns, (whose intelligence always outshines billions of Suns) I pray to thee, O lord, Bless us by removing all obstacles from all of our actions



## ಅಧ್ಯಕ್ಷರ ನುಡಿ

ಪ್ರೀತಿಯ ರಿಚ್ಮಂಡ್ ಕನ್ನಡಿಗರಿಗೆ,

ಇಂದು ತಮ್ಮೆಲ್ಲರ ಸಮಕ್ಷಮಕ್ಕೆ ಪ್ರಪ್ರಥಮ ಬಾರಿಗೆ, ಕನ್ನಡ ಇ-ಪತ್ರಿಕೆ "ಹೂಬನ" ವನ್ನು ತರಲು ನನಗೆ ಅತೀವ ಸಂತೋಷವಾಗುತ್ತಿದೆ. ಶ್ರೀಮತಿ. ಆರತಿ ಗಿರಿಭಟ್ಟನವರ್, ಶ್ರಿ. ಈ ಬಿ ರಾಜು ಮತ್ತು ಶ್ರೀ ಶ್ರೀನಾಥ್ ಭಲ್ಲೆ ಅವರುಗಳ ಪರಿಶ್ರಮದ ಫಲವೇ ನಿಮ್ಮೆದುರಿಗೆ, ಮೂಡಿ ಬಂದಿರುವ ಈ ಪತ್ರಿಕೆ – 'ಹೂಬನ'. 'ಹೂಬನ' ಕನ್ನಡ ಸಾಹಿತ್ಯ ಪರಂಪರೆಯ ನೆನ್ನೆ, ಇಂದು, ನಾಳೆಗಳ ಮೇಲೆ ಒಂದು ಇಣುಕು ನೋಟವನ್ನು ಬೀರಿ, ರಿಚ್ಮಂಡಿನ ಕನ್ನಡಿಗರಲ್ಲಿ ಅವಿತಿರುವ ಕಲೆಗಳಿಗೆ ಪ್ರೋತ್ಸಾಹ ಕೊಡಲಿ ಎಂದು ನಮ್ಮ ಆಸೆ. ಇದು ಅಮೇರಿಕನ್ನಡದ ಸೃಜನಶೀಲ ಸಾಹಿತ್ಯದ ಕಡೆಗೂ ಒಂದು ಹೆಜ್ಜೆ ಎನ್ನೋಣವೆ!

ಮುಂಬರುವ ದಿನಗಳಲ್ಲಿ 'ಹೂಬನ' ತಮ್ಮೆಲ್ಲರನ್ನು ರಂಜಿಸಲಿ ಎಂದು ಹ್ರತ್ಪೂರ್ವಕವಾಗಿ ಆಶಿಸುತ್ತ,

ನಿಮ್ಮ ವಿಶ್ವಾಸಿ

ಪಾವನಿರಾಮ್ ಕೌಶಿಕ್



## ಸಂಪಾದಕರಿಂದ

ಆತ್ಮೀಯ ಕನ್ನಡ ಬಾಂಧವರೇ,

ರಾಷ್ಟ್ರಕವಿ ಕುವೆಂಪು ಅವರ

"ಎಲ್ಲಾದರೂ ಇರು, ಎಂತಾದರು ಇರು, ಎಂದೆಂದಿಗೂ ನೀ ಕನ್ನಡವಾಗಿರು, ಕನ್ನಡವೇ ಸತ್ಯ; ಕನ್ನಡವೇ ನಿತ್ಯ"

ಎಂಬ ಕವಿವಾಣಿಯ ಆದೇಶದಂತೆ ರಿಚ್ಮ್ಂಡಿನ ನಮ್ಮ ಹಿರಿಯ ಕನ್ನಡಿಗರು ತಾಯ್ನಾಡನ್ನು ತೊರೆದು ಸಾವಿರಾರು ಮೈಲಿ ದೂರ ಬಂದು ಅಮೇರಿಕೆಯಲ್ಲಿ ನೆಲೆಸಿದ್ದರೂ ಕೂಡ ತಮ್ಮ ಕನ್ನಡತನವನ್ನು ಉಳಿಸಿಕೊಳ್ಳಲು ರಿಚ್ಮ್ಂಡ್ ಕನ್ನಡ ಸಂಘ ಸ್ಥಾಪಿಸಿದರು. ಸಂಘವು ನಮ್ಮ ಪ್ರಮುಖ ಹಬ್ಬಗಳಾದ ಯುಗಾದಿ, ದೀಪಾವಳಿ, ರಾಜ್ಯೋತ್ಸವಗಳನ್ನು ಆಚರಿಸಿ ನಮ್ಮ ಸಂಸ್ಕೃತಿಯ ಪರಿಚಯವನ್ನು ಮಕ್ಕಳಿಗೂ ಮಾಡಿಕೊಡುತ್ತಿದೆ. ನಮ್ಮ ಮತ್ತು ನಮ್ಮ ಮಕ್ಕಳ ಪ್ರತಿಭೆಯ ಅಭಿವ್ಯಕ್ತಿಗಾಗಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಚರಿಸುತ್ತ ಬಂದಿದೆ. ಇದೇ ನಿಟ್ಟಿನಲ್ಲಿ ಇನ್ನೊಂದು ಪ್ರಮುಖ ಹೆಜ್ಜೆ ಈ ಪತ್ರಿಕೆ – **ಹೂಬನ**.

ಈ ಪತ್ರಿಕೆಯ ಮೂರು ಮೂಲ ಉದ್ದೇಶಗಳು

೧) ಕನ್ನಡ ಸಂಘ ಮತ್ತು ಸಮಾಜದ ಆಗುಹೋಗುಗಳು

೨) ಕನ್ನಡ, ಕರ್ನಾಟಕದ ಬಗ್ಗೆ ಪರಿಚಯ

೩) ಸ್ಥಳೀಯ ಕನ್ನಡಿಗರ ಪ್ರತಿಭೆಯ ಅಭಿವ್ಯಕ್ತಿ

'ಹೂಬನ' ತ್ರೈಮಾಸಿಕ ಪತ್ರಿಕೆ. ಪ್ರತಿ ಜನವರಿ, ಏಪ್ರಿಲ್, ಜುಲೈ ಮತ್ತು ಅಕ್ಟೋಬರ್ ತಿಂಗಳುಗಳಲ್ಲಿ ನಿಮಗೆಲ್ಲ ಇದನ್ನು ತಲುಪಿಸುವ ಯೋಜನೆ ಹಾಕಿಕೊಂಡಿದ್ದೇವೆ. ಇದನ್ನು ಕನ್ನಡ ಮತ್ತು ಇಂಗ್ಲೀಷಿನಲ್ಲಿ ಪ್ರಕಟಿಸುವ ಅಭಿಲಾಷೆ ಇಟ್ಟುಕೊಂಡಿದ್ದೇವೆ. ಸದ್ಯಕ್ಕೆ e-mail ಮೂಲಕ ನಿಮಗೆಲ್ಲರಿಗೂ ತಲುಪಿಸುತ್ತೇವೆ. ಮುದ್ರಿತ ಪತ್ರಿಕೆಯನ್ನು ನಿಮ್ಮ ಕೈಯಲ್ಲಿರಿಸುವ ಸಾಧ್ಯತೆಗಳನ್ನು ಸಂಘದ ಪದಾಧಿಕಾರಿಗಳು ಪರಿಶೀಲಿಸುತ್ತಿದ್ದಾರೆ. ಪ್ರಪ್ರಥಮ ಹೂಬನದ ಸಂಚಿಕೆಯಲ್ಲಿ ಈ ಕೆಳಗಿನ ಅಂಕಣಗಳನ್ನು ಪ್ರಕಟಿಸಿದ್ದೇವೆ.

೧) ಸಂಘದ ಚಟುವಟಿಕೆಗಳು : ಕಳೆದ ಮೂರು ತಿಂಗಳಲ್ಲಿ ಜರುಗಿದ ಕಾರ್ಯಕ್ರಮಗಳ ವಿವರಣೆ, ಚಟುವಟಿಕೆಗಳ ಬಗ್ಗೆ ಓದುಗರ ಅಭಿಪ್ರಾಯ. ಮುಂದೆ ಜರುಗಲಿರುವ ಕಾರ್ಯಕ್ರಮಗಳ ಪರಿಚಯ. ಈ ಮಾಹಿತಿಯನ್ನು ಸಂಘದ ಪದಾಧಿಕಾರಿಗಳು ಈಗಾಗಲೇ ಸಕಾಲಿಕವಾಗಿ ಎಲ್ಲರಿಗೂ ತಿಳಿಸುತ್ತಿದ್ದಾರೆ. ಇದೇ ಮಾಹಿತಿಯನ್ನು ನಾವು ವಿಮರ್ಶೆ, ಫೋಟೊಸಹಿತವಾಗಿ ಪತ್ರಿಕೆಯಲ್ಲಿ ಬಿತ್ತರಿಸುತ್ತೇವೆ.

೨) ನಮ್ಮ ನಾಡು – ನಮ್ಮ ಜನ : ಕರ್ನಾಟಕದ ಸಾಹಿತಿ, ಕ್ರೀಡಾಪಟು, ಕಲಾವಿದ, ವಿಜ್ಞಾನಿ ಮತ್ತು ಇತರ ಸಾಧಕರ ವ್ಯಕ್ತಿ ಪರಿಚಯ. ಹಾಗೇ ಕರ್ನಾಟಕದಲ್ಲಿಯ ಪ್ರಸಿದ್ಧ ಸ್ಥಳ ಪರಿಚಯ.

೩) ರಿಚ್ಮಂಡ್ ಕನ್ನಡಿಗರ ವಾರ್ತೆ : ಸ್ಥಳೀಯ ಕನ್ನಡ ಕುಟುಂಬಗಳಲ್ಲಿ ಆಗುವ ಮಕ್ಕಳ ಹುಟ್ಟು ಹಬ್ಬ, ಮದುವೆ, ಪದವಿ ಪ್ರದಾನ ಮತ್ತಿತರ ಘಟನೆಗಳ ಬಿತ್ತರ. ನೀವು ಸ್ವ–ಇಚ್ಛೆಯಿಂದ ತಿಳಿಸಿದರೆ ಪ್ರಕಟಿಸಲಾಗುತ್ತದೆ.

೪) ಮಕ್ಕಳ ಮಾಲೆ : ಮಕ್ಕಳೇ ಬರೆದ ಕಥೆ, ಕವನ, ಹಾಸ್ಯ, ಪ್ರವಾಸ ಅನುಭವ, ಇತ್ಯಾದಿ. ಈ ಅಂಕಣದಲ್ಲಿ ದೊಡ್ಡವರು ಮಕ್ಕಳಿಗಾಗಿಯೇ ಏನಾದರೂ ಬರೆದು ಕಳಿಸಿದರೆ ಅದನ್ನೂ ಪ್ರಕಟಿಸಲಾಗುವದು.

೫) ಚೈತ್ರದ ಚಿಗುರು : ಯುವ ಜನಾಂಗದವರಿಗಾಗಿಯೇ ಮತ್ತು ಅವರಿಂದ ಬರೆದ ವಿಶೇಷ ಲೇಖನಗಳು.

೬) ಹೂಬನ : ಓದುಗರಿಂದ ಬರುವ ಕಥೆ, ಕವನ, ಪ್ರವಾಸ ಅನುಭವ, ಹಾಸ್ಯ ಲೇಖನ, ಗಾಸಿಪ್ಪಿನ ಗುಂಡಿ ಇತ್ಯಾದಿ.

೭) ಆರೋಗ್ಯಭಾಗ್ಯ : ನಮ್ಮ–ನಿಮ್ಮ ಆರೋಗ್ಯದ ಬಗ್ಗೆ ತಜ್ಞರ ಮಾಹಿತಿಪೂರ್ಣ ಲೇಖನ.

"ಎಲ್ಲ ಬಲ್ಲವರಿಲ್ಲ ಬಲ್ಲವರು ಬಹಳಿಲ್ಲ ಸಾಹಿತ್ಯ ಎಲ್ಲರಿಗೂ ಇಲ್ಲ" ಎಂದ ಸರ್ವಜ್ಞ. ಆದರೆ ಎಲೆಮರೆಯ ಕಾಯಿಯಂತೆ ನಿಮ್ಮಲ್ಲಿರುವ ಪ್ರತಿಭೆ ದೈನಂದಿನ ಜೀವನದಲ್ಲಿ ಅಡಗಿರಬಹುದು. ಆ ಪ್ರತಿಭೆ ಈ 'ಹೂಬನ'ದ ಮೂಲಕ ಹೊರಬರಲಿ ಎನ್ನುವದೇ ನಮ್ಮ ಮಹದಾಸೆ. ನೀವಷ್ಟೇ ಅಲ್ಲ ನಿಮ್ಮ ಮಕ್ಕಳಿಗೂ ಬರೆಯಲು ಪ್ರೋತ್ಸಾಹಿಸಿರಿ. ಇಲ್ಲಿಯ ಜನ–ಜೀವನ ಮತ್ತು ಸಂಸ್ಕೃತಿಯ ಪ್ರಭಾವ ಪ್ರತ್ಯಕ್ಷವಾಗಿಯೋ, ಪರೋಕ್ಷವಾಗೀಯೋ ನಮ್ಮೆಲ್ಲರ ಮೇಲೆ ಆಗಿದೆ. 'ರೋಮಿಗೆ ಹೋದಾಗ ರೋಮನ್ ರಂತಿರು' ಎಂಬ ಗಾದೆಯಂತೆ ಈ ಸಂಸ್ಕೃತಿಯನ್ನು ನಮ್ಮ ಅವಿಭಾಜ್ಯ ಅಂಗವಾಗಿ ಮಾಡಿಕೊಂಡಿದ್ದೇವೆ. ಅದಕ್ಕಾಗಿಯೇ ನಾವು ಇಂಗ್ಲೀಷಿನಲ್ಲಿಯೂ ಲೇಖನಗಳನ್ನು ಸ್ವಾಗತಿಸುತ್ತೇವೆ. ಪತ್ರಿಕೆಯನ್ನು ಎರಡೂ ಭಾಷೆಗಳಲ್ಲಿ ಪ್ರಕಟಿಸಿ, ನಮ್ಮ ಸಮಾಜದ ಎಲ್ಲರಿಗೂ ಅದನ್ನು ತಲುಪಿಸುವ ಹೊಣೆ ಹೊತ್ತಿದ್ದೇವೆ.

ಮುಂಜಾವಿನ ರವಿಕಿರಣ ಕಂಡು ಅರಳಿದ ನೈದಿಲೆಯಂತೆ ನಿಮ್ಮ ಲೇಖನಗಳು ಸತತ ಅರಳಲಿ, ಲೇಖನಗಳ ಮಹಾಪೂರ 'ಹೂಬನ'ದ ಕಡೆಗೆ ಹರಿದು ಬರಲಿ.

ಇವಿಷ್ಟೂ ಅಂಕಣಗಳಿಗೆ ಒಂದು ನಿರ್ದಿಷ್ಟ ಸ್ಥಳದ ನಿರ್ಬಂಧವಿದೆ. ಸ್ಥಳಾವಕಾಶವನ್ನೂ ಮೀರಿ ಲೇಖನಗಳು ಬಂದಲ್ಲಿ ಹೆಚ್ಚಿನವನ್ನು ಮುಂಬರುವ 'ಹೂಬನ'ದ ಸಂಚಿಕೆಗಳಲ್ಲಿ ಅಥವಾ ಯುಗಾದಿ ಮತ್ತು ದೀಪಾವಳಿಯ ವಿಶೇಷಾಂಕಗಳಲ್ಲಿ ಪ್ರಕಟಿಸಲು ಪ್ರಯತ್ನಿಸುತ್ತೇವೆ.

ಕನ್ನಡದಲ್ಲಿ ಲೇಖನಗಳನ್ನು 'ಬರಹ'ದ ಮೂಲಕ ಮತ್ತು ಇಂಗ್ಲೀಷಿನ ಲೇಖನಗಳನ್ನು 'WORD' ಮೂಲಕ ಬರೆದು ಕಳಿಸಿರಿ. ನಿಮ್ಮ ಲೇಖನಗಳನ್ನು ದಯವಿಟ್ಟು hoobanaeditors@yahoogroups.comಗೆ ಕಳಿಸಿರಿ. ಅಗಸ್ಟ್ 31ಕ್ಕಿಂತ ಮೊದಲು ಬರುವ ಲೇಖನಗಳನ್ನು ಪರಿಶೀಲಿಸಿ ಅಕ್ಟೋಬರ್‌ನ 'ಹೂಬನ'ದಲ್ಲಿ ಪ್ರಕಟಿಸುತ್ತೇವೆ.

ಈ 'ಹೂಬನ' ಪತ್ರಿಕೆಯನ್ನು ಪ್ರಥಮವಾಗಿ ಹೊರತರುವ ಪ್ರಯತ್ನ, ಇದರ ಸಫಲತೆ ಎಲ್ಲವೂ ನಮ್ಮೆಲ್ಲರ ಸೊತ್ತು. ಇದರ ಲಾಲನೆ–ಪೋಷಣೆ, ಇದರ ಸದೃಢ ಬೆಳವಣಿಗೆಯ ಹೊಣೆ ನಮ್ಮ–ನಿಮ್ಮೆಲ್ಲರದು. "ಇವನಾರವ ಇವನಾರವ ಎನ್ನದೇ ಇವ ನನ್ನವ ಇವ ನನ್ನವ ಎನ್ನು" ಎಂದರು ಜಗಜ್ಯೋತಿ ಬಸವಣ್ಣ. ಅಂತೆಯೇ "ಇದು ಯಾರದು ಇದು ಯಾರದು" ಅಂತನ್ನದೇ "ಇದು ನಮ್ಮದು ಇದು ನಮ್ಮೆಲ್ಲರದು" ಎಂದು ಭಾವಿಸಿ ಎಲ್ಲರೂ ಒಟ್ಟಾಗಿ 'ಹೂಬನ'ದಲ್ಲಿ ಬರೆಯೋಣ, ಬರೆದದ್ದನ್ನು ಒಟ್ಟಾಗಿ ಓದಿ, ನಮ್ಮ ಮಕ್ಕಳಿಗೂ ಓದಿ ಹೇಳಿ ಸವಿಯೋಣ ಮತ್ತು ಆನಂದಿಸೋಣ. ಏನಂತೀರಾ?

ನಮಸ್ಕಾರಗಳು.

ಆರತಿ ಎಸ್ ಗಿರಿಭಟ್ಟನವರ

 ಸಂಘದ ಚಟುವಟಿಕೆಗಳು:

ರಿಚ್ಮಂಡ್‌ನಲ್ಲಿ ಯುಗಾದಿ ‘ರಿಂಗುಣಿತ’

ಮಕ್ಕಳು, ಮಹಿಳೆಯರು, ಪುರುಷರು ಎಲ್ಲರಿಗೂ ಯುಗಾದಿಯ ಸಂಭ್ರಮ. ರಿಚ್ಮಂಡ್ ಕನ್ನಡ ಸಂಘದ ವೇದಿಕೆ, ಕನ್ನಡತನದ ಅನಾವರಣಕ್ಕೆ ಸಾಕ್ಷಿಯಾಗಿದ್ದು ಹೀಗೆ...

ತವರಿಂದ ದೂರಾಗಿ ಕಡಲಾಚೆ ನೆಲೆಸಿರುವ ರಿಚ್ಮಂಡ್ ನಗರದ ಕನ್ನಡಿಗರಿಗೆ ಯುಗಾದಿ ಸಂಭ್ರಮವನ್ನು ಉಣಬಡಿಸಿದ ಕೀರ್ತಿ, ರಿಚ್ಮಂಡ್ ಕನ್ನಡ ಸಂಘಕ್ಕೆ ಸಲ್ಲುತ್ತದೆ. ಸಂಘಕ್ಕೆ ಅಕ್ಷರ ನಮನ ಸಲ್ಲಿಸುತ್ತಲೇ, ಯುಗಾದಿ ಕಾರ್ಯಕ್ರಮದ ವೈಭವವನ್ನು ಮೆಲುಕು ಹಾಕೋಣ.

ಏಪ್ರಿಲ್ 23 ಶನಿವಾರ ರಿಚ್ಮಂಡ್ ನಗರದ ಕನ್ನಡಿಗರಿಗೆ ಬೆಚ್ಚನೆಯ ಕಾಣಿಕೆಯನ್ನು ನೀಡಿತ್ತು. ವರ್ಜೀನಿಯದ ಹಿಂದೂ ಸೆಂಟರ್‌ನಲ್ಲಿ ಕನ್ನಡ ಸಂಘ ಆಯೋಜಿಸಿದ್ದ ಯುಗಾದಿ ಸಂಭ್ರಮದ ಕಾರ್ಯಕ್ರಮದತ್ತ ಕನ್ನಡಿಗರು ಪಾದಬೆಳೆಸಿದ್ದರು.

ಮಧ್ಯಾಹ್ನ ಸುಮಾರು ನಾಲ್ಕೂವರೆಗೆ ಸಂಘದ ಸದಸ್ಯರು ಕುಟುಂಬ ಸಮೇತರಾಗಿ ಆಗಮಿಸಿದರು. ಇದೇನು ಮದುವೆ ಮನೆಯೇನೋ ಎಂಬಂತೆ, ರೇಷ್ಮೆ ಸೀರೆಯನ್ನುಟ್ಟು ನೀರೆಯರು ಸಡಗರದಿಂದ ಓಡಾಡುತ್ತಿದ್ದರು. ಹಾಯ್, ಹಲೋಗಳನ್ನು ಪಕ್ಕಕ್ಕಿಟ್ಟು, ನಮಸ್ಕಾರ, ಆರೋಗ್ಯವೇ ಎಂಬ ಉಭಯ ಕುಶಲೋಪರಿಗಳು ಸಮಾರಂಭಕ್ಕೆ ವಿಶೇಷ ಮೆರಗು ತಂದಿತ್ತು.

ಸುಮಾರು ೫.೧೫ ನಿಮಿಷಕ್ಕೆ ಗುಡಿಯ ಅರ್ಚಕರ ಪೂಜೆಯ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ಸಿಕ್ಕಿತು. ಕಾರ್ಯಕ್ರಮ ಶುರುವಾದ ತಕ್ಷಣ ಎಲ್ಲರಿಗೂ ಕೋಸಂಬರಿ, ಪಾನಕ, ಕೇಕ್‌ಗಳ ಲಘು ಉಪಾಹಾರ ನಡೆಯಿತು. ಸಂಘದ ಅಧ್ಯಕ್ಷ ಪಾವನಿ ರಾಮ್ ತಮ್ಮ ಸ್ವಾಗತ ಭಾಷಣದಲ್ಲಿ ಎಲ್ಲರಿಗೂ ಸ್ವಾಗತ ಕೋರಿದರು. ನಂತರ ಡಾ। ಕುಮಾರ್ ಹಾಗು ವೇದಾ ಶೇಖರ್ ಅವರ ಆಕರ್ಷಕ ನಿರೂಪಣೆಯೊಂದಿಗೆ ಕಾರ್ಯಕ್ರಮದ ವೈವಿಧ್ಯಗಳು ಬಿಚ್ಚಿಕೊಂಡವು. ಸಾಂಸ್ಕೃತಿಕ ಕಾರ್ಯಕ್ರಮಗಳು ಅನಾವರಣಗೊಳ್ಳ ತೊಡಗಿದವು.

ಸಾಂಚಿತಾ ಪ್ರಭಾಕರ್ ಕಂಠದಿಂದ ಹೊರಹೊಮ್ಮಿದ ‘ಪಾರ್ವತಿ ವರಸುತ ಗಜಾನನ’ ಎಂಬ ಗಣೇಶ ಸ್ತುತಿ ಸುಶ್ರಾವ್ಯವಾಗಿತ್ತು. ಯುಗಾದಿ ಹಬ್ಬವನ್ನು ಬಣ್ಣಿಸುವ ‘ರಿಷಿ ’ಚಿತ್ರದ ಹಾಡು ಎಲ್ಲರಿಗೂ ಖುಷಿ ತಂದಿತು. ಸ್ನೇಹ ಭಲ್ಲೆ ಹಾಡಿಗೆ ನೃತವನ್ನು ಸಂಯೋಜಿಸಿದ್ದರು. ಪುಟಾಣಿಗಳ ನೃತ್ಯ ಕಣ್ಣಿಗೆ ಹಬ್ಬ ತಂದಿತ್ತು.

ಪುಟಾಣಿ ಸಂಜನಾ ನಾಯಕ್ ‘ಶ್ರೀದೇವಿ ಮಹಕಾಳಿ ಪರಮೇಶ್ವರಿ’ ಹಾಡನ್ನು ಹಾಡಿದ ನಂತರ ನಮ್ಮನ್ನು ರಂಜಿಸಿದವರು ಉಮಾ ಇಟ್ಟಿಗಿ ತಂಡ. ಭರತನಾಟ್ಯ, ತಿಲ್ಲಾನ, ರಾಮಕೃಷ್ಣ ಅವರ ಮಿಮಿಕ್ರಿ ಹಾಗೂ ಯುವಕರ ತಂಡದ ವೈವಿಧ್ಯಗಳು ಭಲೇ ಎನ್ನುವಂತಿತ್ತು. ಕನ್ನಡಕ್ಕೆ ಅಪರೂಪ ಅನ್ನಬಹುದಾದ ‘ರಿಷಿ’ ಚಿತ್ರದ ಬಾಂಗ್ರಾ ಹಾಡಿಗೆ ಮತ್ತೊಂದು ಕಿರಿಯ ಮಕ್ಕಳತಂಡ ಆಕರ್ಷಕವಾಗಿ ಹೆಜ್ಜೆ ಹಾಕಿತು.

ವಾಣಿ ಪಾವನಿ ರಾಮ್ ನೃತ್ಯ ಸಂಯೋಜಿಸಿದ್ದ ‘ಹಚ್ಚೇವು ಕನ್ನಡದ ದೀಪ’ ಹಾಡಿಗೆ ಕೂರ್ಗ್ ಶೈಲಿಯ ಉಡುಪನ್ನು ತೊಟ್ಟ ಮಹಿಳೆಯರು ಚೆಂದದ ನೃತ್ಯ ಮಾಡಿದರು. ನಾದಿರ ಶಾ ಅವರ ಸಂಯೋಜನೆಯ ಕಥಕ್ ನೃತ್ಯದಲ್ಲಿ ‘ಮೊದಲು ನೆನೆದೇವು ಸ್ವಾಮಿ ನಿನ್ನನು’ ಎಂಬ ಗೀತೆ ಚೆನ್ನಾಗಿ ಮೂಡಿಬಂತು. ಮಕ್ಕಳನ್ನು ಉತ್ತೇಜಿಸುವ ಸಲುವಾಗಿ ಡಾ.ಕುಮಾರ್ ಅವರಿಂದ Barnes & Nobles - gift card ಇದಾದ ನಂತರ ಒಂದು ಕನ್ನಡ ನಾಟಕ ನಡೆಯಿತು.

ಇದೇನಿದು ಮಹಿಳೆಯರ ಮಾತೇ ಆಯಿತಲ್ಲ, ಗಂಡಸರ ಕಡೆಯಿಂದ ನರ್ತನ ಇಲ್ಲವೇ ಅಂದುಕೊಂಡಿರಾ? ಸತ್ಯ ಹರಿಶ್ಚಂದ್ರ ಚಿತ್ರದ ‘ಕುಲದಲ್ಲಿ ಕೀಳ್ಯಾವುದೋ ಹುಚ್ಚಪ್ಪ’ ಹಾಡಿಗೆ ದಪ್ಪನೆಯ ಗಿರಿಜಾ ಮೀಸೆ ಹೊತ್ತ ಪುರುಷರ ತಂಡ ಮೈಮರೆತು ಹೆಜ್ಜೆ ಹಾಕಿದರು.

ಕಾರ್ಯಕ್ರಮದ ಕಡೆಯ ಅಂಗವಾದ ಭೋಜನದ ಸವಿಯನ್ನು ವರ್ಣಿಸಲು ಕಷ್ಟ. ಎಲ್ಲರೂ ಒಟ್ಟಿಗೆ ಕುಳಿತು ಹಬ್ಬದ ಊಟ ಮಾಡಿದ್ದು ಮಜವೋ ಮಜ. ವಾಂಗಿಬಾತ್, ಹಪ್ಪಳ ಪಳಿದ್ಯ, ಆಂಬೊಡೆ, ಹೋಳಿಗೆ ಇತ್ಯಾದಿ ಭಕ್ಷ್ಯಗಳನ್ನು ಮಾಡಿ ಎಲ್ಲರ ಹೊಟ್ಟೆಯನ್ನು ತಣಿಸಿದ ವನಿತಾ ಲೋಕಕ್ಕೆ ನಮ್ಮ ವಿಶೇಷ ವಂದನೆಗಳು.

‘ಆ ಹಾಡು ಚೆನ್ನಾಗಿತ್ತು, ಈ ನೃತ್ಯ ಬೊಂಬಾಟ್...’ ಎಂಬ ಹರಟೆಯೊಂದಿಗೆ ಊಟ ಮುಗಿಯಿತು. ಸಂಘಕ್ಕೆ ಧನ್ಯವಾದ ಹೇಳುತ್ತ, ಸಂಘದ ಸದಸ್ಯರು ಪರಸ್ಪರ ಬೈಬೈ ಹೇಳಿ ಕೊಳ್ಳುತ್ತ ಭಾರದ ಹೃದಯದೊಂದಿಗೆ, ಸವಿ ನೆನಪುಗಳೊಂದಿಗೆ ಮನೆಯ ಹಾದಿ ಹಿಡಿದರು.

http://thatskannada.indiainfo.com/chowchow/festivals/ugadi/030505richmond.html

–ಶ್ರೀನಾಥ್ ಭಲ್ಲೆ

<u>ಚಲನಚಿತ್ರ</u>: May 21st 2005 ‘ಪ್ರೀತಿ–ಪ್ರೇಮ–ಪ್ರಣಯ’ ಚಲನಚಿತ್ರದ ಪ್ರದರ್ಶನವಾಯಿತು.

<u>ಗಾಯನ ಸಂಜೆ:</u> May 28th 2005 ಶ್ರೀಮತಿ ಉಮಾ ಇಟ್ಟಿಗಿಯವರ ಮನೆಯಲ್ಲಿ ಗಾಯನ ಸಂಜೆ. ರತ್ನಮಾಲಾ ಪ್ರಕಾಶ್ ತಂಡದವರೊಡನೆ ಅಮೇರಿಕಾ ಪ್ರವಾಸದಲ್ಲಿರುವ ಅಪೂರ್ವ ಶ್ರೀಧರ್ ಎಂಬ 13 ವರ್ಷದ ಬಾಲಪ್ರತಿಭೆಯಿಂದ ಅಪೂರ್ವ ಗಾಯನ ಪ್ರದರ್ಶನ. ಹೆಚ್ಚಾಗಿ ಭಾವಗೀತೆಗಳನ್ನೇ ಹಾಡಿದ ಅಪೂರ್ವ, ಒಬ್ಬ ಉತ್ತಮ ಗಾಯಕಿಯಾಗುವುದರಲ್ಲಿ ಸಂಶಯವಿಲ್ಲ. ಈ ಕಾರ್ಯಕ್ರಮವನ್ನು ತಮ್ಮ ಸ್ವಗೃಹದಲ್ಲಿ ಏರ್ಪಡಿಸಿದ ಇಟ್ಟಿಗಿ ಸಂಸಾರಕ್ಕೆ ನಮ್ಮ ವಿಶೇಷ ವಂದನೆಗಳು

–ಶ್ರೀನಾಥ್ ಭಲ್ಲೆ

<u>Camping:</u> ಜೂನ್ 11–12ರಂದು ಸಂಘದಿಂದ ಏರ್ಪಡಿಸಲಾಗಿದ್ದ Camping ಕಾರ್ಯಕ್ರಮದ ಪ್ರಯುಕ್ತ smith mountainನಲ್ಲಿ ಒಂದು ರಾತ್ರಿಯ ಬಿಡಾರ. ಹೊಳೆಯ ನೀರಿನ ಸ್ನಾನ, ಮರಳ ಮೇಲಿನ volley ball ಆಟ, trekking, boating ಇತ್ಯಾದಿ ಚಟುವಟಿಕೆಗಳಿಂದ ಕೂಡಿದ Camping ಕಾರ್ಯಕ್ರಮ ಯಶಸ್ವಿಯಾಗಿ ನೆಡೆಯಿತು. ಚಿತ್ರಾನ್ನ–ಮೊಸರನ್ನ, ಪಾವ್–ಭಾಜಿ, ಉಪ್ಪಿಟ್ಟು, ಜೋಳ ಇತ್ಯಾದಿ ಊಟ–ತಿಂಡಿ–ತಿನಿಸುಗಳಿಂದ ಎಲ್ಲರ ಹೊಟ್ಟೆ ತಣಿಸಿದರ ಹಿಂದೆ ಹಲವಾರು ಜನರ ಪರಿಶ್ರಮವಿತ್ತು. ಎಲ್ಲರಿಗೂ ನಮ್ಮ ಅಕ್ಷರ ನಮನ. ಇಂತಹ ಕಾರ್ಯಕ್ರಮಗಳು ಇನ್ನೂ ಹೆಚ್ಚಾಗಿ ಮೂಡಿಬರಲಿ ಎಂದು ಆಶಿಸುವ

–ಶ್ರೀನಾಥ್ ಭಲ್ಲೆ






ನಮ್ಮ ನಾಡು – ನಮ್ಮ ಜನ

"ಹಾರೈಸು ಹಾರೈಸು ಹಾರೈಸು ಜೀವ, ಹಾರೈಸು ನೀನಾಗುವನ್ನೆಗಂ ದೇವ"

ಎಂಬ ಹರಕೆಯನ್ನು ತನ್ನ ನೆನಪಿನ ದೋಣಿಯಿಂದ ತೆಗೆದು ಸಿರಿನುಡಿಯ ಕನ್ನಡಿಗರ ಯಾತ್ರೆಯ ದೋಣಿಯಲ್ಲಿ ಇಟ್ಟು

"ಎಲ್ಲಾದರು ಇರು, ಎಂತಾದರು ಇರು, ಎಂದೆಂದಿಗೂ ನೀ ಕನ್ನಡವಾಗಿರು"

ಎಂಬ ಮಾನಸದ ದೀಕ್ಷೆಯನ್ನು ತೊಡಿಸಿದ, ಕವಿ ಕುವೆಂಪು[ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪ, ರಾಷ್ಟ್ರಕವಿ ೧೯೦೪–೧೯೯೪]. ರಿಚ್ಮಂಡಿನ ಕನ್ನಡಿಗರ ನಮನಗಳನ್ನು ಕನ್ನಡ ಸಾಹಿತ್ಯದ ಪರವಾಗಿ ಹಿಂದಿನ, ಈಗಿನ ಮತ್ತು ಮುಂದಿನ ಸಾಹಿತ್ಯ ಕೃಷಿಗಾರರ ಪರವಾಗಿ ಈ ಕವಿ ಕುವೆಂಪು ಸ್ವೀಕರಿಸಲಿ.

ನಮ್ಮ ಕರ್ನಾಟಕದ ಚರಿತ್ರೆ ಹಳೆಯದು. ಸುಸಂಸ್ಕೃತಿಯ ತವರು, ವಿದ್ಯೆ, ವಿನಯ, ಸಂಪನ್ನತೆಯ ಬೀಡು. ಸೃಜನಶೀಲರು, ಪಂಪ, ರನ್ನ, ಕುಮಾರವ್ಯಾಸಾದಿ ಕವಿಪುಂಗವರು, ಶಂಕರ, ರಾಮಾನುಜ, ಮಧ್ವ, ಅಲ್ಲಮಾದಿ ಧರ್ಮದ ಆಚಾರ್ಯರುಗಳು, ಕರ್ಮದ ಬಸವಣ್ಣ, ರಾಣಿ ಚೆನ್ನಮ್ಮ, ಟಿಪ್ಪೂ ಸುಲ್ತಾನಾದಿ ಕ್ರಾಂತಿಕಾರಿಗಳು ಮತ್ತು ಸಕಲ ಸಮುದಾಯದ ರೂವಾರಿಗಳು ಎಡೆಬಿಡದೆ, ಬೆಳಸಿ ಹೋದ ಹೂಬನ. ಈಗ ಅಂತರ್ಜಾಲದ ಪ್ರತಿಭೆಯ ಪರಾಕ್ರಮದಲ್ಲಿ ಪ್ರಜ್ವಲಿಸುತ್ತಿರುವ ಪ್ರಜಾಪ್ರಭುತ್ವದ ನವನಾಡು ನಮ್ಮದು. ಅಂತಹ ನಾಡಿನ ಪುಣ್ಯರೂಪಿಯಾದ ಕನ್ನಡದ ಸಾಹಿತ್ಯ ಶಾರದೆಯನ್ನು ಹೊರನಾಡಿನಲ್ಲಿ ಹಾಗೂ ನಮ್ಮೆಲ್ಲರ ರಿಚ್ಮಂಡಿನಲ್ಲಿ ನೆನೆದು, ಈ ನಮ್ಮ ಭಾವ ನುಡಿಗಳಿಂದ, ಆಕೆಯನ್ನು ಸಿಂಗರಿಸುವಲ್ಲಿ, ಬಳಸುವ ಹೂಬನದ ದಿವ್ಯ ಬಿಡಿ ಹೂಗಳಾಗಲಿ.

ಹಾಗೆಯೇ ಈ ರಿಚ್ಮಂಡ್ ಮಹಾನಗರ, ಕವಿ ಕುವೆಂಪುವಿನ ರಕ್ತ ಸಂಬಂಧಿಗಳ ನೆಲೆಯಾಗಿರುವುದಲ್ಲದೇ, ಅವರ ಕನ್ನಡದ ಶಕ್ತಿ ಸಂಬಂಧಿಗಳಾದ ನಮ್ಮೆಲ್ಲರ ತಾಣವೂ ಆಗಿದೆ. ಈ ಕವಿ ತನ್ನೆಲ್ಲ ಭಾವನೆಗಳನ್ನು ಬಿಡಿಗನ್ನಡದಲ್ಲಿ ಬಣ್ಣಿಸಿದ 'ಬನದ ಕವಿ'. ವಿಶ್ವಮಾನವತೆಯ ತಾರಕಮಂತ್ರವನ್ನು ತಬ್ಬಿಕೊಂಡು ಕೀರ್ತಿ ಶನಿ ಎಂದು ಸಾರಿದ 'ಸರಳ ಕವಿ'. ವಿಶ್ವಕವಿಗಳ ಹೂಬನದ ಧಾಮದಲ್ಲಿ ಪುಟ್ಟದುಂಬಿಯಾಗಿ, ಸತತ ಯಾತ್ರಿಕನಾಗಿ ಬದುಕಿ ಶ್ರೀ ಸಾಮಾನ್ಯರಿಗೆ ಮಾದರಿಯಾದ 'ಸಂಸಾರಿಕ ಕವಿ'. ಈ ನಮ್ಮ ನಾಡಿಗೆ, ನಮ್ಮ ಜನತೆಯ ಅನಂತ ಯಾತ್ರೆಗೆ ಇನಿತು ತಿನಿಸುಗಳನ್ನು ಅಕ್ಷಯದ ನುಡಿ ಪಾತ್ರೆಯಲ್ಲಿ ಬಿಟ್ಟುಹೋದ 'ರಸಚೇತನದ ಕವಿ' ಕುವೆಂಪುವಿಗೆ ನಮ್ಮ ಅಂತರಾಳದಿಂದ ನುಸುಳಿ ಬರುವ ಗುನುಗುಗಳು [ಎಲ್ಲಾದರು ಇರು, ನಾನೇ ವೀಣೆ, ತನುವು ನಿನ್ನದು, ಆನಂದಮಯ, ಜಯಕರ್ನಾಟಕ ಮಾತೆ, ಬಾಗಿಲೊಳು ಕೈ ಮುಗಿದು, ಇದೋ ಗಂಗೋತ್ರಿ ಮಾನಸ ಯಾತ್ರಿ,........] ಸದಾ ಸ್ಪಂದಿಸಲಿ.

ಈ ನಮ್ಮ ನವನೂತನ ರಿಚ್ಮಂಡ್ ಕನ್ನಡಿಗರ 'ಹೂಬನ'ದಿಂದ ಜೈ ಕರ್ನಾಟಕ, ಸಿರಿಗನ್ನಡಂ ಗೆಲ್ಗೆ.

ಈ ಬಿ ರಾಜು



ರಿಚ್ಮಂಡ್ ಕನ್ನಡಿಗರ ವಾರ್ತೆ

ಇದೀಗ ಬಂದ ಬಿಸಿಬಿಸಿ ಸುದ್ದಿಗಳು

೧) ಶ್ರೀಮತಿ ಲತಾ ಮತ್ತು ಡಾ. ಅಶೋಕ ಕುಮಾರ್ ಅವರಿಗೆ ಈ ಜುಲೈಯಲ್ಲಿ ಅವರ ಮದುವೆಯ ಬೆಳ್ಳಿಹಬ್ಬಕ್ಕೆ ನಮ್ಮ ಹಾರ್ದಿಕ ಶುಭಾಶಯಗಳು

೨) ಹರ್ಷ ಡಾಂಟೆ – ಹೈಸ್ಕೂಲ್ ಪದವೀಧರನಾಗಿ ಪ್ರಿನ್ಸ್ ಟನ್‌ಗೆ ಹೊರಟ ಹರ್ಷನಿಗೆ ಹೂಬನದ ಶುಭ ಹಾರೈಕೆಗಳು

೩) ಜೂನ್ ೧೨ ೨೦೦೫ ರಂದು ಜನಿಸಿದ ಪಂಚಮಿಯ ಹೆಮ್ಮೆಯ ತಂದೆ–ತಾಯಿಯರಾದ ಶ್ರೀ ಸತೀಶ್ ಹಾಗೂ ಶ್ರೀಮತಿ ಸುರೇಖ ಅವರಿಗೆ ನಮ್ಮ ಹಾರ್ದಿಕ ಶುಭಾಶಯಗಳು

೪) ಸದ್ಯದಲ್ಲೇ ಬಿಡುಗಡೆಯಾಗಲಿದೆ

ರಿಚ್ಮಂಡ್‌ನ ಗಾನ ಗಂಧರ್ವ ಡಾ. ಸೀತಾರಾಮ್ ಮಲವಳ್ಳಿ ಅವರ ಅಮೇರಿಕಾ ಮಲ್ಲಿಗೆ ಭಾಗ–೨(2 cassettes & 1 CD) ತಪ್ಪದೇ ನಿರೀಕ್ಷಿಸಿ ಮತ್ತು ಕೊಂಡು ಕೇಳಿ ಆನಂದಿಸಿ. ಹೆಚ್ಚಿನ ವಿವರಗಳಿಗೆ 804 784 3693 ಗೆ ಫೋನಾಯಿಸಿ.

 ಮಕ್ಕಳ ಮಾಲೆ

## ಜಾಣ ಮೊಲ:

ಒಂದಾನೊಂದು ಕಾಡಿನಲ್ಲಿ ಅತಿ ಪ್ರಬಲವಾದ ಸಿಂಹವೊಂದಿತ್ತು. ಅತಿ ದುರಾಸೆಯಿಂದ ದಿನವೂ ಹಲವಾರು ಪ್ರಾಣಿಗಳನ್ನು ಕೊಲ್ಲುತ್ತಿತ್ತು. ಹೀಗಾಗಿ ಇತರ ಪ್ರಾಣಿಗಳು ಒಂದು ಸಭೆ ಸೇರಿ ದಿನಕ್ಕೊಂದು ಬೇರೆ ಬೇರೆ ಪ್ರಾಣಿಯನ್ನು ಸಿಂಹಕ್ಕೆ ಆಹಾರವಾಗಿ ಕಳಿಸುವುದು ಎಂದು ನಿರ್ಧಾರ ಮಾಡಿತು. ಸಿಂಹವೂ ಇದಕ್ಕೆ ಒಪ್ಪಿಗೆ ನೀಡಿತು. ದಿನಕ್ಕೊಂದು ಪ್ರಾಣಿಯ ಸರದಿಯಂತೆ ಮೊಲದ ಸರದಿಯೂ ಬಂತು.

ಜಾಣ ಮೊಲ ಸಿಂಹಕ್ಕೆ ಒಂದು ಗತಿ ಕಾಣಿಸಬೇಕು ಎಂದು ನಿರ್ಧರಿಸಿ, ಆಹಾರಕ್ಕೆಂದು ಹೊರಟು ಸಿಂಹದ ಗುಹೆಗೆ ಸಂಜೆಯ ವೇಳೆಗೆ ತಲುಪಿತು. ಅಷ್ಟು ಹೊತ್ತಿಗೆ ಸಿಂಹಕ್ಕೆ ಸಹಿಸಲು ಅಸಾಧ್ಯವಾದ ಹಸಿವಾಗಿತ್ತು. ಸಿಂಹದ ಬಳಿ ಹೋದೊಡನೆಯೇ ಮೊಲವು "ನಿನಗಿಂಥಾ ಬಲಿಷ್ಟವಾದ ಸಿಂಹವೊಂದರಿಂದ ತಪ್ಪಿಸಿಕೊಂಡು ಬರಲು ತಡವಾಯಿತು, ಕ್ಷಮಿಸು" ಎಂದು ಕೇಳಿಕೊಂಡಿತು.

ಮೊದಲೇ ಕೆರಳಿದ್ದ ಸಿಂಹಕ್ಕೆ ತನಗೆ ಪ್ರತಿಸ್ಪರ್ಧಿಯೊಬ್ಬ ಇದ್ದಾನೆಂದು ತಿಳಿದಾಗ ಇನ್ನೂ ಕೋಪ ಹೆಚ್ಚಾಯಿತು. "ಮೊದಲು ನನ್ನ ವೈರಿಯ ಜಾಗ ತೋರಿಸು. ಅವನನ್ನು ಕೊಂದು ನಂತರ ನಿನ್ನನ್ನು ತಿನ್ನುವೆ, ನಡಿ" ಎಂದು ಹೇಳಿತು.

ಮೊಲವು ಸಿಂಹವನ್ನು ಆಳವಾದ, ನೀರು ತುಂಬಿದ ಬಾವಿಯ ಬಳಿ ಕರೆದು ತಂದು "ಇದೋ ನೋಡು ನಿನ್ನ ವೈರಿ" ಎಂದು ಬಾವಿಯ ಒಳಗೆ ತೋರಿಸಿತು. ಮೊದಲೇ ಹಸಿದಿದ್ದ ಮೂರ್ಖ ಸಿಂಹ, ತಾನು ನೋಡುತ್ತಿರುವುದು ತನ್ನದೇ ಪ್ರತಿಬಿಂಬ ಎಂದೂ ಯೋಚಿಸದೆ, ವೈರಿಯನ್ನು ಕೊಲ್ಲಲು ಬಾವಿಗೆ ಹಾರಿತು. ಸುಸ್ತಾಗಿದ್ದ ಸಿಂಹಕ್ಕೆ ಮೇಲೆ ಬರಲು ಆಗಲೇ ಇಲ್ಲ. ಹೀಗೆ ಜಾಣ ಮೊಲ ತಾನೂ ಉಳಿದು ಕಾಡಿನ ಪ್ರಾಣಿಗಳನ್ನು ಸಿಂಹದಿಂದ ರಕ್ಶಿಸಿತು

ನೀತಿ: ಶಕ್ತಿಗಿಂತ ಯುಕ್ತಿ ಮೇಲು

– ಶ್ರೀನಾಥ್ ಭಲ್ಲೆ

---

## My Camping Trip by Janhavi Giribhatnavar

Over the hills and in the mountains was where my camping adventure started. Our camping site was in the Appalachian Mountain Range. It was arranged by the Richmond Kannada Sangha. After three long hours, we finally reached Smith Mountain Lake Park. It was near Roanoke, Virginia. As soon as we got to the right spot, we started to set up our tent. We had already tried it at home, so it didn't take too long.

As soon as we finished setting up our tent, we went to the beach lake. It was a lake with sand. The beach lake was very warm. However, when you get out, you would get cold. They also had a diving area. It was floating on water! It was very deep down around the diving area, but I made it. Soon it was time for us to get out, but I didn't want to because it was so much fun swimming in the water and playing with my friends. Then I took a bath in the bathroom. The water was not very warm while I was taking my shower.

We had pav-bhaji, which was very spicy, for dinner, while sitting around the campfire. For dessert we had smores that were very sticky. The smoke from the fire made my eyes water. Singing around the campfire was the most fun thing we did besides swimming. A few people from other campsites complained that we were too noisy. Then we had to go to bed. I slept fairly well, even though my back hurt. I was warm and cozy inside the tent. For breakfast I had some cereal because I wasn't too hungry. We went swimming again, but it was not as fun the second time. A lot of people went boating, but I still wanted to go swimming. Soon we had to leave for home.

My camping adventure started in the hills and over the mountains, but it ended while we were still having fun.

ಚೈತ್ರದ ಚಿಗುರು

Being Indian Is Cool (or Hot!!!)

There has never been a better time to be an Indian. Indian clothes, music, movies, food etc are cool (or hot!) Being an Indian kid can certainly have its advantages now. One doesn't have to hide ethnicity under the rug or pretend to be an "average Joe" just to fit in. If a kid wants to dance Indian, or play an Indian instrument, it's widely accepted. It's cool (or hot!)

When I was growing up in the 70s, things were totally different. First of all, there weren't too many Indians in my high school, (just myself and my brother.) We grew up in a small town in the south where most of the kids were Christian and belonged to the Bible Club or they played football, were cheerleaders, and suntanned on the deck on the weekends. We were brown skinned, rice eating vegetarians who wore saris, congregated at other Indians houses, worshipped Lord Venkateshwara and went to India over the summers. The rest of the neighborhood went to the pools. We were as different as day and night.

These days there's not a need to hide being Indian. In fact we have Asian American Festivals, Indian Festivals, and the schools themselves celebrate diversity. They welcome it. Indian kids can proudly display their heritage by showcasing their Indian talents, bringing in Indian foods and wearing Indian clothes. My daughter wore salwars to her high school when the entire school celebrated Asian day. I would never think about wearing Indian clothes for fear of being ridiculed. Things have come a long way from the homogeneous societies of the 60s and 70s.

I would love to be an Indian kid now. I would love to have my friends "oohing and aahing" over my clothes and wanting to dress like me! I would love to bring my friends to the festivals and have them sample the foods. It's a great feeling to have general society acknowledge my culture and traditions.

So be proud of who you are and where you come from. Sure, being Indian will also have its disadvantages but what ethnic group doesn't have them? Parents may pressure kids to achieve the grades (study, study, study!) and be a doctor, engineer or other Indian track profession. But the basic premise is that Indian parents are also some of the most concerned and devoted parents I have ever seen. I guess Indian kids have to take the whole "Indian package" and then work with it!

So if you're Indian, you are definitely cool (or hot!) More power to you!

Latha Kumar



ಆರೋಗ್ಯ ಭಾಗ್ಯ

**Cholesterol – What is it? Why is it important?**

These days whichever way we turn, we hear more and more about cholesterol. Well, here is the lowdown!

Cholesterol is a soft, waxy substance found in the blood stream and in the body's cells. It is essential for life, good health and serves many functions. Some of which are formation of cell membranes and several hormones in the body. A human is able to live and function only due to concerted action of all these cells. Therefore, loss of cell membrane integrity is incompatible with life. So far, it sounds like cholesterol is really good isn't it? But, wait a minute, does it not also cause heart attacks, brain attacks (i.e. strokes) and result in death? Well, then what is it - Good or Bad?

Actually it is neither. What makes it good or bad is the protein that carries it in the blood stream (remember cholesterol is waxy and therefore does not dissolve in water). Low-Density Lipoprotein or LDL, picks up cholesterol (from the liver), and carries it in the blood stream to cells all over for their (own) maintenance as cell membranes are constantly formed, broken, repaired and newly synthesized. This is GOOD! However, too much of a good thing – i.e. too high a level of LDL-cholesterol in the blood stream will cause the excess to buildup in the arteries, putting you at risk for a heart attack or stroke.

High Density Lipoprotein or HDL, on the other hand, picks up cholesterol FROM the arteries and carries it back to the liver so it can eliminate it from the body. Therefore, high HDL-cholesterol levels in the blood stream, allows more scavenging of the build up in the arteries, thus reducing the risk of heart attacks and strokes. Needless to say, this is highly desirable.

Triglycerides, is a cousin of LDL-cholesterol. As you may have guessed, too much of it isn't good news either! There are several other less well-known cousins called Very Low Density Lipoproteins (VLDL), Intermediate Density Lipoprotein (IDL) etc. To make it simple to understand, all these have been lumped together as Non-HDL Cholesterol and they are bad news when in excess.

An important question then arises. If these (cholesterols) are so important and essential, why have we not heard about these till the last century and half of human history? Why now? Well, the answer is several folds.

First, and the most important, the hunter gatherer human had to physically struggle to get each day's food. Each day required enormous physical activity in hunting, gathering and subsequently preparing the food to make it edible. This consumed a lot of energy. In addition, they promptly burnt up whatever excess they had consumed, the very next day as there was no refrigeration of unconsumed food. Thus no time for fat build up! And, no obesity!

Secondly, heart attacks and strokes are usually diseases of middle ages (>40's), and the hunter probably got eaten by a lion or a tiger, way before the disease had a chance to manifest. This is proven as autopsy studies of soldiers (in their 20's, 30's) who died in the battlefield, already show SIGNIFICANT arterial build up of cholesterol!

The next and the most widely recorded phase of human history i.e. the Agrarian went on for several centuries. These still required large daily expenditures of energy before food could be gathered and made fit for consumption. Lack of refrigeration made obesity almost unheard of, whereas improvement in sanitation, water etc resulted in nearly doubling of human life expectancy from 25 yrs to 45yrs. Still no evidence of heart attacks and strokes, because though these (guys and gals) did not eaten by a lion or tiger (at least not as often), they succumbed to infectious diseases (pre-antibiotic and pre-modern medicine era). Industrialization then followed and we are now in information technology era where progression of degree of "civilization" was inversely associated with expenditure of calories for earning and living daily life. In addition, medical advances have significantly contributed to the near doubling of life expectancy, once again, from 45 yrs in 1900 to 80 yrs.

The next question then is: why do some people live with artery blockages all their life, never suffering a "a heart or a brain attack" whereas others succumb to it?
For answer – look in the next edition of this newsletter.

Ashok Kumar MD Email: klashokkumar2000@yahoo.com



ಗಾಸಿಪ್ಪಿನ ಗುಂಡಿ

ಗ ಗಾ ಗಿ ಗೀ ಗು .............ಗೌ ಗಂ ಗಃ

ಅಲ್ಲಾರೀ ರಿಚ್ಮಂಡಿನಲ್ಲಿ ಯಾರು ಐಲಾಧಿಪತಿಯಂತ – ಅಯ್ಯೋ ಐಲು ಅಂದರೆ ಕನ್ನಡದ ಐಲು ಅಲ್ಲಾರಿ, ಇಂಗ್ಲೀಷ್ ಐಲು(isle)ರೀ, ಅಂದರೆ ಸಣ್ಣ islandಇನ (ದ್ವೀಪ) ಅಧಿಪತಿ ಅಂತ ..

ಅದೇ ಮೊನ್ನೆ ಮೂರು ತಿಂಗಳ ಹಿಂದೆ ನಡೀತಲ್ಲ ಜೇಮ್ಸ್ ನದಿ ಮಧ್ಯೆ ಇರೋ islandಗಳ auction.

ಅದರಲ್ಲಿ ಯಾರಿಗೂ ಹೇಳದೇ ಕೇಳದೇ ಹೋಗಿ, ನಿಗರಿ ನಿಗರಿ ಕೈ ಎತ್ತಿ, ಚೆಕ್ ಮಾಡದೇ island ಗಳನ್ನ ಕೊಂಡ್ಕೊಂಡ್ರಂತೆ.

ಆಮೇಲೆ ನದಿಯಲ್ಲಿ, ಕೊಂಡುಕೊಂಡ್ಮೇಲೆ, ನೊಡೋಕೆ ಹೋಗಿ, ಐಲುಗಳು ಕಾಣದೇ ನೀರಿನಲ್ಲಿ ಮುಳುಗಿರುವದನ್ನ ನೋಡಿ, ನೀರು ಕೊಂಡ್ಕೊಂಡೆ ಅಂತ ಮಂಡೆ ಚಚ್ಕೊಂಡ್ರಂತೆ. ಈ ಬಂಬ್ಡ ಬಜಾಯಿಸಿದ ಐಲಾಧಿಪತಿ ಯಾರು ಅಂತ ನಿಮಗೆ ಗೊತ್ತಿಲ್ವಾ???

ಅಯ್ಯೊ ಕೇಳಿ, ಹೇಳ್ತೀನಿ.

ಅಲ್ಲಾರೀ, ಅವರಲ್ಲಾರೀ, ಅವರಿಗೆ ಬೇಕಾದ್ದು ಬೆಟ್ಟ, ಗುಡ್ಡ, ನದಿ, ಗಿಡ, ಮರ, ಬಳ್ಳಿ. Green Thumb ಅಲ್ಲವಾ? ಧ್ಯಾನ ಅಲ್ವಾ...

ಅಯ್ಯೋ ಅಲ್ಲಾರೀ, ಅವರೂ ಅಲ್ಲ .. ಅವರಿಗೆ ಬೇಕಾದ್ದು Good Time. ಅವರು Good Time Charlie ಅಲ್ವಾ. ಭಾರೀ ಭೋಜನ ಬೇಕು. islandನಲ್ಲಿ ಏನು ತರಗೆಲೆ ತಿಂತಾರೆ ಅಲ್ವಾ? ಯಾಕೇಂದ್ರೆ island ಮುಳುಗಿದರೆ ಮುಳುಗ್ತದೆ, ಎದ್ರೆ ಏಳ್ತದೆ. ಎಲ್ಲಾ ವರುಣದೇವನ ಕೈವಾಡ. ಐಲು ಹತ್ತಿದಂಗೆ ಅಲ್ವಾ ವರುಣನ ಕಾಟ?

ಏನು ಬಂತು ಪಾಪ ಹಾಗೆ ಆಗ್ಬೇಕು? ಕಡೆಗೆ ಏನಾಯ್ತು ಅಂತ ಗೊತ್ತ..

ಬಾಯಿಗೆ ಬಿದ್ದ ತುತ್ತು ಗಂಟ್ಲಿಗೇ ಇಳೀಲಿಲ್ಲಂತೆ.

ದುಡ್ಡು ಗಿಡ್ಡು ಎಲ್ಲ ತೊಗೊಂಡು ಹೋಗಿದ್ರಂತೆ, closingಏ ಅಗ್ಲಿಲ್ವಂತೆ. Title ತಕ್ರಾರು ಆಯ್ತಂತೆ.

ಪಾಪ ಐಲಾಧಿಪತಿ ಆಗ್ಲಿಲ್ವಂತೆ ಅದಕ್ಕೇ!!

ಥೂ ಥೇರೀಕೆ ಅಂತ ಕಾರ್ ನ ಒದ್ದು ಈಗ ಮಾಡ್ತೀನ್ ನೋಡು ನನ್ನ ಮಕ್ಕಟ್ಬೋನೇ ಅಂತ ಕನ್ನಡ ಪಿಚ್ಚರ್ ತೆಗೆಯೋಕೆ ಒಂಟವ್ರಂತೆ.. ಅದಕ್ಕೆ ಏನು ಹೆಸರಿಡ್ತಾರಂತೆ ಗೊತ್ತಾ? ಅಯ್ಯೋ "ಐಲಾಧಿಪತಿ" ಅಂತಾನೇರೀ. ಅದಕ್ಕೆ ನಿಮ್ಮ ನಟಶೇಖರುಗೆ acting job ಬೇಕಿದ್ದರೆ ಕೇಳಿ ಅವರನ್ನ..

ಅದೂ ಅಂಗೇನೇ ಮುಳುಗ್ ಹೋಗುತ್ತೋ ಏನೋ ನೋಡ್ಬೇಕು. ತಲೆ ಚಚ್ಕೋದು ಗೊತ್ತಿದ್ರೆ ಸಾಕು acting ಮಾಡಬಹುದು.

ಬತ್ತೀನ್ರೀ ... ತುಂಬಾ ಬೇಜಾರು.. ಏನಕ್ಕೋ ಏನೋ ತುಂಬಾ ಬೇಜಾರು.

ನಾನು ಹೇಳಿದೆ ಅಂತ ಯಾರಿಗೂ ಹೇಳ್ಬೇಡ್ರೀ, ಗೊತ್ತಾಯ್ತೇನು? ಗಾಸಿಪ್ ಗರ್ಲ್ ಕರೀತಾವ್ಳೆ.

ಪರಾರಿ ಗಂಡು ಯಾರು ಅಂತ ಕೇಳ್ಬೇಕು,

ಬರ್ಲಾ.... ಬರ್ಲಾ.... ಬರ್ಲಾ....

ಗಾಸಿಪ್ ಗೌರಿ



ನುಡಿಮುತ್ತು – D V G

ನೂರಾರು ಮತವಿಹುದು ಲೋಕದುಗ್ರಾಣದಲಿ।

ಆರಿಸಿಕೋ ನಿನ್ನ ರುಚಿಗೊಪ್ಪುವುದನದರೊಳ್॥

ಸಾರದಡುಗೆಯನು ಒಳ ವಿಚಾರದೊಲೆಯಲಿ ಮಾಡು।

ಬೇರೆ ಮತಿ ಬೇರೆ ಮತ . . . . ಮಂಕುತಿಮ್ಮ॥



ಮುಂಬರುವ ಸಂಘದ ಚಟುವಟಿಕೆಗಳು

| | |
|---|---|
| Samarthana concert | 8th July 2005 |
| Movie | 6th August 2005 |
| Beach Party | 3rd Sept 2005 |
| Trip to Atlantic city | 30th Sept - 2nd Oct 2005 |

ನಿಮ್ಮ ಅನಿಸಿಕೆಗಳಿಗೆ ಜಾತಕ ಪಕ್ಷಿಯಂತೆ ಕಾದು ಕುಳಿತಿರುವ – hoobanaeditors@yahoogroups.com